## ನಿರೂಪಣೆಯಲ್ಲಿ ಲವಲವಿಕೆ

'ಉನ್ಮಾದದ ಒರತೆ, ಬತ್ತಿಹೋದ ಮಾನವತೆ' (ಜೂ. 19, ವಿಶಾಖ ಎನ್.) 'ನಿಮ್ಮೊಡನೆ' ಬರಹ, ಜನರು ಮತ್ತು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಪ್ರೇರೇಪಿಸುತ್ತದೆ. ಗೆದ್ದಾಗ ಬೀಗುವ, ಸೋತಾಗ ಮುದುಡಿ ಕೂರುವ ಮನುಷ್ಯನ ಸಹಜ ಮನೋವ್ಯಾಪಾರವನ್ನು ಚಿತ್ರಿಸುವ ಗುರು ಪಿ.ಎಸ್. ಅವರ 'ನಿಮ್ಮ ಮಗಳ ರಿಸಲ್ಟ್' ಬರಹ ಚೇತೋಹಾರಿಯಾಗಿದೆ. ವಿನಮ್ರವಾಗಿ 'ಇಲ್ಲ' ಎನ್ನುವುದನ್ನು ತಿಳಿಸುವ ಅನಿತಾ ನಾಡಿಗ್ ಅವರ ಹೇಳಿಕೆಗೆ ಇಲ್ಲ ಎನ್ನಲಾದೀತೇ?

—ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು



## ಮಾರ್ಗದರ್ಶಿ

'ಏನಿದು ಡೂಮ್‌ಸ್ಕ್ರೋಲಿಂಗ್ ಸಿಂಡ್ರೋಮ್?' (ಜೂ. 19, ಡಾ. ವಸುಂಧರಾ ಭೂಪತಿ) ಬರಹ, ಪೋಷಕರು ಮತ್ತು ಮಕ್ಕಳಿಗೆ ಮಾರ್ಗದರ್ಶಿಯಾಗಿದೆ. ಮೊಬೈಲ್ ಬಳಕೆಯಿಂದ ಆಗಬಹುದಾದ ಅನಾಹುತಗಳನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿದೆ. ಮೊಬೈಲ್ ಮಾಯೆಯಿಂದ ಹೊರಬರುವ ಸರಳ ಮಾರ್ಗೋಪಾಯಗಳನ್ನೂ ತಿಳಿಸಿದೆ.

—ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

## ಮನಮುಟ್ಟುವ ಸಂದೇಶ


'ಮೊಬೈಲ್ ಬಿಡಿ ರಿಯಾಯಿತಿ ಪಡೆಯಿರಿ' (ಜೂ. 19, ಸೌಮ್ಯ ಶಿಗ್ಗಾಂವಕರ) 'ನಿಮ್ಮ ಪುಟ' ಬರಹ ಮನಸೆಳೆಯಿತು. ಇತ್ತೀಚೆಗೆ ಮೊಬೈಲ್ ಗೀಳು ಬಹಳವಾಗಿದ್ದು ಎಲ್ಲ ಸಮಯದಲ್ಲೂ ಬಳಕೆ ನಡೆದಿದೆ. ಉಪಾಹಾರ ಗೃಹಗಳಲ್ಲಿ ಊಟದ ಸಮಯದಲ್ಲಿ ಮೊಬೈಲ್ ಬಳಸದೆ ಇದ್ದ ಗ್ರಾಹಕರಿಗೆ ಶೇ.10 ರಿಯಾಯಿತಿ ನೀಡಿದ್ದು ವಿಶೇಷವೆನಿಸಿತು. ಸಂದೇಶ ಮನಮುಟ್ಟುವಂತಿದೆ.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ನಿತ್ಯನೂತನ 'ಮಹಾಭಾರತ'

'ನೆಲಗನ್ನಡ ಮಹಾಭಾರತ' ನನಗಂತೂ ಒಂದು ರೀತಿ ಸಡಗರ. ಚಿಕ್ಕಂದಿನಿಂದಲೂ ದೇವಸ್ಥಾನಗಳಲ್ಲಿ ಮಹಾಭಾರತದ ಬಗ್ಗೆ ವಿವಿಧ ಪುರಾಣಗಳನ್ನು ಕೇಳಿದ್ದೇವೆ. ವರ್ಷಗಟ್ಟಲೆ ದೂರದರ್ಶನದಲ್ಲಿ ಧಾರಾವಾಹಿ, ತೆಲುಗು, ಕನ್ನಡ ಸಿನಿಮಾಗಳಲ್ಲಿ ಮಹಾಭಾರತದ ವಿವಿಧ ಕಥೆಗಳನ್ನು ತೆರೆಯ ಮೇಲೆ ನೋಡಿ ಆನಂದಿಸಿದ್ದೇವೆ. ಆದರೂ ಈ ರಾಮಾಯಣ, ಮಹಾಭಾರತಗಳು ನಿತ್ಯನೂತನ. ಅವಕ್ಕೆ ಮುಪ್ಪಿಲ್ಲ. ಸದಾ ತಾರುಣ್ಯದಿಂದ ವಿಜೃಂಭಿಸುತ್ತವೆ. ಈ ಮಹಾಭಾರತದ ಹಲವಾರು ಘಟನೆಗಳ ಟಿಪ್ಪಣಿಗಳು ಎನ್ನುವಂತಿದೆ ಈ ನೆಲಗನ್ನಡ ಮಹಾಭಾರತ. ಎಚ್.ಎಸ್. ಮೋಣಪ್ಪ ಅವರ ಕಲೆಗಾರಿಕೆ ಸಂಭ್ರಮಿಸಿದೆ.

—ಕೆ.ಎಂ. ಮಧ್ವರಾಯ, ಬೆಂಗಳೂರು






## ಮಾಹಿತಿಪೂರ್ಣ 'ಮಾವು'

'ನಾವು ನೀವು ಮಾವು ತಾವು' (ಜೂ. 19) ಮುಖಪುಟ ಲೇಖನಗಳು ಬಹಳ ಚೆನ್ನಾಗಿವೆ. ವಿಶೇಷ ಮಾವಿನ ತಳಿಗಳು, ಅವುಗಳ ಕುರಿತ ಆಸಕ್ತಿಕರ ಸಂಗತಿಗಳು, ಅಂಕಿಅಂಶಗಳು ಮಾಹಿತಿಪೂರ್ಣವಾಗಿವೆ. ರಾಮನಗರದ ಮಾವಿನ ವಹಿವಾಟು, ಅಲ್ಫಾನ್ಸೊ ಮಾವಿನ ಹಿನ್ನೆಲೆ ಬಹಳ ಚೆನ್ನಾಗಿತ್ತು. ಕರಿ ಇಶಾಡ ಮಾವಿನ ಕುರಿತು ಓದಿ ಅಚ್ಚರಿಯಾಯಿತು.

—ನಳಿನಿ ರಾವ್, ಹಾಸನ

## ಅಗ್ರ-ಸಮಗ್ರ

ಹಣ್ಣುಗಳಲ್ಲಿ 'ಅಗ್ರ' ಎನ್ನಬಹುದಾದ ಮಾವಿನ ಬಗೆಗೆ ಮಾಹಿತಿ 'ಸಮಗ್ರ'ವಾಗಿತ್ತು.

—ಸಿಪಿಕೆ, ಮೈಸೂರು

## ಅಚ್ಚರಿ ತಂದ ಮಾಹಿತಿ

'ಎತ್ತಣ ಮಾಮರ ಎತ್ತಣ ಕೋಗಿಲೆ' ಎಂಬಂತೆ ಅಮೆರಿಕದ ಹಾರ್ಲೆ ಡೇವಿಡ್ಸನ್ ಬೈಕ್ ರಫ್ತಿಗೆ ಮಾವಿನ ನಂಟು ಬೆಸೆದುದು ಅಚ್ಚರಿಯಾಯಿತು.

—ಮಧು, ಬೆಂಗಳೂರು

## ಬೀದರ್‌ಗೆ ಕರೆದೊಯ್ಯಿತು



'ಧರಿನಾಡಿನ ಮಾತುಕತೆ' (ಜೂ. 19) 'ಚೆನ್ನುಡಿ' ಸರಣಿಯಲ್ಲಿ ಬಿ.ಜಿ. ಪಾರ್ವತಿ ವಿ. ಸೋನಾರೆ ಅವರ ಬರಹ, ನಮ್ಮಾಕೆಗೆ ತವರಿಗೆ ಹೋಗಿ ಗೆಳತಿಯರ ಜೊತೆ ಕಾಲ ಕಳೆದಂತೆ ಭಾಸಮಾಡಿಸಿತು. ಬೀದರ್‌ಗೆ ಕರೆದೊಯ್ಯಿತು.

—ಗುರುರಾಜ ಜೋಶಿ, ಬೆಂಗಳೂರು

## ಚೆಂದದ 'ಚೆನ್ನುಡಿ'

'ಚೆನ್ನುಡಿ' ಅಂಕಣದ ಮೂಲಕ ನಾಡಿನಾದ್ಯಂತ ಹರಡಿಕೊಂಡಿರುವ ಕನ್ನಡ ಭಾಷೆಯ ಸೊಗಡನ್ನು, ವೈಶಿಷ್ಟ್ಯವನ್ನು 'ಸುಧಾ' ಪ್ರಕಟಿಸುತ್ತಿರುವುದು ಶ್ಲಾಘನೀಯ. ಹಲವಾರು ಆತಂಕಗಳನ್ನು ಎದುರಿಸುತ್ತಿರುವ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಸರಣಿಯ ಮೊದಲ ಲೇಖನವಾಗಿ ಕರ್ನಾಟಕದ ಕಿರೀಟಪ್ರಾಯ ಗಡಿ ಜಿಲ್ಲೆ ಬೀದರ ಭಾಷೆಯ ಸೊಗಡಿನ ವೈಶಿಷ್ಟ್ಯವನ್ನು, ಸೌಂದರ್ಯವನ್ನು ಲೇಖಕಿ ಸಮರ್ಥವಾಗಿ ಪರಿಚಯಿಸಿದ್ದಾರೆ. ಎಲ್ಲರಿಗೂ ಅರ್ಥವಾಗುವ ನಿಟ್ಟಿನಲ್ಲಿ ಪ್ರಾದೇಶಿಕ ಪದಗಳ ಅರ್ಥ ಕೊಟ್ಟಿರುವುದು ಔಚಿತ್ಯಪೂರ್ಣ.

—ಸಂಜೀವಕುಮಾರ ಅತಿವಾಳೆ, ಬೀದರ

## ನಾಡು, ನುಡಿಯ ಚೆಲುವು

ನಮ್ಮ ನಾಡು, ನುಡಿಯ ತೋಟದಲ್ಲಿ ವಿಧವಿಧದ ಆಡುಮಾತಿನ ವರ್ಣವಿನ್ಯಾಸವಿದೆ, ಸಂಸ್ಕೃತಿ, ಚರಿತ್ರೆಗಳ ಸುಗಂಧವಿದೆ. ಇದನ್ನು ದರ್ಶಿಸಲೆಂದೇ ಪ್ರಾರಂಭವಾದ 'ಚೆನ್ನುಡಿ' ಸರಣಿಗೆ ಸ್ವಾಗತ! ಯಾವುದೇ ಒಂದು ಭಾಷೆಯೇ ಮೇಲು, ಒಂದು ಸಂಸ್ಕೃತಿಯೇ ಶ್ರೇಷ್ಠವೆಂದು ಬೀಗುವುದರಲ್ಲಿ ಅರ್ಥವಿಲ್ಲ. ತೋಟದಲ್ಲಿಯ ಗುಲಾಬಿ, ಮಲ್ಲಿಗೆ, ಸಂಪಿಗೆ, ಸೇವಂತಿಗೆ ಇವುಗಳಲ್ಲಿ ಯಾವುದು ಚೆಂದ? ಯಾವುದು ಶ್ರೇಷ್ಠವೆಂದು ಹೇಳಲಾದೀತೆ? ನಾಡು, ನುಡಿಯ ಚೆಲುವಿನ ಈ ಮುಖವನ್ನು ತೋರಿಸುವ ಇಂಥ ಪ್ರಯತ್ನಗಳಿಂದಾಗಿ 'ಸುಧಾ' ಓದುಗರಿಗೆ ಪ್ರಿಯವಾಗಿದೆ!

—ಮಾಲತಿ ಪಟ್ಟಣಶೆಟ್ಟಿ, ಧಾರವಾಡ

## ಹಳೀ ದಿನಗೋಳ ನೆಪ್ಪ ಆದೂ...

ತೋಲ್ ಛಂದ ಬರದೀರಿ! ಓದಾಣ ನಮ್ ಹಳೀ ದಿನಗೋಳ ಎಲ್ಲಾ ನೆಪ್ಪ ಆದೂ. ಬಕ್ಕುಳ ಖುಷಿ ಆಯ್ತು ನೋಡಗ... ಮಣ್ಣೆತ್ತಮಾಸಿಗೀ ನಾ ಬೀದರಕ ಹೊಂಟೀದಾ. ಜರೂರ ಭೇಟಿ ಆಗಾರಿ.

— ಸಾಧನಾ ಕುಲಕರ್ಣಿ, ಬೆಂಗಳೂರು

## ತೋಲ್ ಖುಷಿ ಆತ್ರಿ

ನಮ್ದು 'ಸುಧಾ' ಪೇಪರ್ ಜೋಡಿ ಅಂದಾಜ್ ಚಾಲೀಸ್ ವರ್ಷದ್ದು ದೋಸ್ತಿ. ಬಿದರಿ ಕನ್ನಡದಾಗಿನ ಮಾತು ಕತೆ ಓದಿ ತೋಲ್ ಖುಷಿ ಆತ್ರಿ. ರೇಡಿಯೋದ್ದಾಗ ಭೀ ಕೇಳಿದೆವು ಮನಸಿಗೆ ತೋಲ್ ಸುಕುನ್ ಆತ್ರಿ.

—ಶೋಭಾ ಮುಕುಂದ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in